**ಕರ್ನಾಟಕ ಸರ್ಕಾರ**
**(ಕೃಷಿ ಇಲಾಖೆ)**

**ಸಂಖ್ಯೆ:** ಉಕೃನಿ/ಸಾಕೃಘ/ಸಾ.ಸಿರಿ/ಸುತ್ತೋಲೆ/2021-22

ಕೃಷಿ ಆಯುಕ್ತಾಲಯ,
ಶೇಷಾದ್ರಿ ರಸ್ತೆ, ಬೆಂಗಳೂರು
ದಿನಾಂಕ:09.02.2022

**ಸಾವಯವ ಸಿರಿ ಸುತ್ತೋಲೆ-1**

**ವಿಷಯ:** **2021-22ನೇ ಸಾಲಿನ ಘೋಷಣಾ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯ ಅನುಷ್ಠಾನಕ್ಕೆ ಚಾಲನೆ ನೀಡುವ ಬಗ್ಗೆ.**

**ಉಲ್ಲೇಖ:** ಸರ್ಕಾರಿ ಆದೇಶ ಸಂಖ್ಯೆ:AGRI-ACT/95/2021, ಬೆಂಗಳೂರು ದಿನಾಂಕ: 08.02.2022

****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ 2021-22ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಮಾನ್ಯ ಮುಖ್ಯಮಂತ್ರಿಗಳು "ಜನರಿಗೆ ಆರೋಗ್ಯಕರ ಹಾಗೂ ರಾಸಾಯನಿಕ ಮುಕ್ತ ಕೃಷಿ ಮತ್ತು ತೋಟಗಾರಿಕಾ ಉತ್ಪನ್ನಗಳನ್ನು ದೊರಕಿಸಲು ಹಾಗೂ ಸಾವಯವ ಕೃಷಿಯನ್ನು ಉತ್ತೇಜಿಸಲು ರೂ.500.00ಕೋಟಿಗಳ ಯೋಜನೆಯನ್ನು ರೂಪಿಸಲಾಗುವುದು" ಎಂದು ಘೋಷಿಸಿದ್ದು, ಈ ಸಂಬಂಧ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿವತಿಯಿಂದ ಸಿದ್ಧಪಡಿಸಲಾಗಿರುವ ಕ್ರಿಯಾ ಯೋಜನೆಗೆ ಉಲ್ಲೇಖಿತ ಸರ್ಕಾರದ ಆದೇಶದನ್ವಯ ಅನುಮೋದನೆ ಪಡೆಯಲಾಗಿರುತ್ತದೆ. 2021-22ನೇ ಸಾಲಿನಲ್ಲಿ ಪ್ರಾರಂಭಿಸಲಾಗುವ ಈ ಹೊಸ ಯೋಜನೆಯನ್ನು "ಸಾವಯವ ಸಿರಿ" ಯೋಜನೆಯ ಹೆಸರಿನಲ್ಲಿ ರಾಜ್ಯಾದ್ಯಂತ ಅನುಷ್ಠಾನಗೊಳಿಸಲು ಸಿದ್ಧಪಡಿಸಲಾಗಿರುವ ವಿವರವಾದ ಮಾರ್ಗಸೂಚಿಗಳಿಗೆ ಸರ್ಕಾರದ ಅನುಮೋದನೆ ಮತ್ತು ಆದೇಶ ಹೊರಡಿಸಲಾಗಿರುತ್ತದೆ (ಪ್ರತಿ ಲಗತ್ತಿಸಿದೆ).

**2021-22ನೇ ಸಾಲಿನಲ್ಲಿ "ಸಾವಯವ ಸಿರಿ" ಯೋಜನೆಯ ತುರ್ತು ಅನುಷ್ಠಾನಕ್ಕಾಗಿ ಕೆಳಕಂಡಂತೆ ಮಾರ್ಗಸೂಚಿಗಳನ್ನು ನೀಡಲಾಗಿದೆ.**

1. ಮೊದಲಿಗೆ, ಯೋಜನೆಯ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ನೊಂದಾಯಿತ ಸಾಮಾಜಿಕ ಸಂಸ್ಥೆಗಳನ್ನು ಪಾರದರ್ಶಕವಾಗಿ ಆಯ್ಕೆ ಮಾಡಬೇಕಾಗಿರುತ್ತದೆ. ಸಾಮಾಜಿಕ ಸಂಸ್ಥೆಗಳ ಆಯ್ಕೆಗಾಗಿ ಅರ್ಜಿ ನಮೂನೆ, ಅರ್ಜಿ ತಪಾಸಣೆ ಮಾನದಂಡಗಳನ್ನು **ಅನುಬಂಧ-4 & 4a** ರಲ್ಲಿ ನೀಡಲಾಗಿದೆ.
2. ಜಿಲ್ಲಾ ಮಟ್ಟದಲ್ಲಿ ಸಾಮಾಜಿಕ ಸಂಸ್ಥೆಯ ಆಯ್ಕೆಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ಕೇಂದ್ರ ಕಛೇರಿಗೆ ಸಲ್ಲಿಸುವುದು.
3. ರಾಜ್ಯ ಮಟ್ಟದ ಸಮಿತಿಯಿಂದ ಸಾಮಾಜಿಕ ಸಂಸ್ಥೆಗಳ ಆಯ್ಕೆಗಾಗಿ ಅನುಮೋದನೆ ಪಡೆದ ನಂತರ ಜಿಲ್ಲೆಗಳಲ್ಲಿ ಸಾಮಾಜಿಕ ಸಂಸ್ಥೆಗಳೊಂದಿಗೆ ಮಾಡಿಕೊಳ್ಳಬೇಕಾದ ಒಡಂಬಡಿಕೆ ಮತ್ತು ಸಂಸ್ಥೆಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು **ಅನುಬಂಧ-5, 5a & 5b** ರಲ್ಲಿ ನೀಡಲಾಗಿದೆ.
4. ಜಿಲ್ಲೆಗಳಲ್ಲಿ ಆಯ್ಕೆಯಾದ ಸಾಮಾಜಿಕ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡ ನಂತರ ರಾಷ್ಟ್ರೀಕೃತ ಬ್ಯಾಂಕಿನಲ್ಲಿ ಆ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರು ಹಾಗೂ ಸಾಮಾಜಿಕ ಸಂಸ್ಥೆಯ ನಿಯೋಜಿಸುವ ಪ್ರತಿನಿಧಿ ಹೆಸರಿನಲ್ಲಿ ಜಂಟಿ ಖಾತೆಯನ್ನು ತೆರೆದು ಕ್ಷೇತ್ರಮಟ್ಟದಲ್ಲಿ ಯೋಜನೆಯಡಿ ಮುಂದೆ ಆಯ್ಕೆಯಾಗುವ ರೈತರಿಗೆ ನೀಡಬೇಕಾಗುವ ಸಾಮಾರ್ಥ್ಯಾಭಿವೃದ್ಧಿ ಸಂಬಂಧ ಜಿಲ್ಲೆಗಳಿಗೆ 2021-22ನೇ ಸಾಲಿನಲ್ಲಿ ಬಿಡುಗಡೆ ಮಾಡಲಾಗುವ ಅನುದಾನವನ್ನು ಜಂಟಿ ಖಾತೆಗೆ ವರ್ಗಾಯಿಸುವುದು.
5. ಸಮಾನಾಂತರವಾಗಿ, ಯೋಜನೆಯ ಅನುಷ್ಠಾನಕ್ಕಾಗಿ ತಾಲ್ಲೂಕುಗಳಲ್ಲಿ ಸಾವಯವ ಕೃಷಿ ಕಾರ್ಯಕ್ರಮಗಳ ಅನುಷ್ಠಾನದಲ್ಲಿ ಟ್ರಸ್ಟ್ ಅಥವಾ ಸೊಸೈಟಿ ಕಾಯ್ದೆಯಡಿ ನೋಂದಾಯಿತ ಅನುಭವ ಹೊಂದಿರುವ ಸ್ಥಳೀಯ ಸಾವಯವ ರೈತರ ಗುಂಪು/ ಸಂಘ/ ಒಕ್ಕೂಟಗಳನ್ನು ಆಯ್ಕೆ

ಮಾಡಬೇಕಾಗಿರುತ್ತದೆ. ನೊಂದಾಯಿತ ಸಾವಯವ ಕೃಷಿಕರ ಸಂಘ/ಸಂಸ್ಥೆ/ಒಕ್ಕೂಟಗಳ ಪಾರದರ್ಶಕ ಆಯ್ಕೆಗಾಗಿ ಅರ್ಜಿ ನಮೂನೆ, ಅರ್ಜಿ ತಪಾಸಣೆ ಮಾನದಂಡಗಳು ಮತ್ತು ಯೋಜನೆಯಡಿಯಲ್ಲಿ ಸಂಘಗಳು ನಿರ್ವಹಿಸಬೇಕಾದ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು **ಅನುಬಂಧ-6, 6a & 6b ರಲ್ಲಿ** ನೀಡಲಾಗಿದೆ.

6. ಪ್ರತಿ ತಾಲ್ಲೂಕಿನಲ್ಲಿ ಆಯ್ಕೆಯಾಗುವ ಸಾವಯವ ರೈತರ ಗುಂಪು/ ಸಂಘ/ ಒಕ್ಕೂಟಗಳು ಕ್ಷೇತ್ರ ಮಟ್ಟದಲ್ಲಿ ಒಟ್ಟು 750 ಸಾವಯವ ಕೃಷಿಕರನ್ನು/ಸಾವಯವ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಆಸಕ್ತಿಯಿರುವ ಕೃಷಿಕರನ್ನು ಆಯ್ಕೆಮಾಡುವುದು.
7. ಕ್ಷೇತ್ರಮಟ್ಟದಲ್ಲಿ ಆಯ್ಕೆಯಾಗುವ ಕೃಷಿಕರನ್ನು ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಯ ಮುಖಾಂತರ ತರಬೇತಿ, ಅಧ್ಯಯನ ಪ್ರವಾಸ ಇನ್ನಿತರೆ ಸಂಬಂಧಿತ ಚಟುವಟಿಕೆಗಳಲ್ಲಿ ಒಳಪಡಿಸುವುದು. ಹಾಗೆಯೇ, ಕ್ಷೇತ್ರಮಟ್ಟದಲ್ಲಿ ಆಯ್ಕೆಯಾಗುವ ಕೃಷಿಕರಿಗೆ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ರೈತ ಮಹಿಳೆ ಫಲಾನುಭವಿಗಳಿಗೆ ಶೇ.90ರಷ್ಟು ಸಹಾಯಧನದಲ್ಲಿ ನೀಡಬಹುದಾದ ಸಾವಯವ ಕೃಷಿಗೆ ಪೂರಕವಾದ ಕಾರ್ಯಕ್ರಮ/ ಘಟಕಗಳು ಹಾಗೂ ನೆರವಿನ ಪ್ರಮಾಣವನ್ನು **ಅನುಬಂಧ-3,** ರಲ್ಲಿ ಹಾಗೂ ಈ ಸಂಬಂಧದ ಅನುಷ್ಠಾನ ಮಾರ್ಗಸೂಚಿಗಳನ್ನು **ಅನುಬಂಧ-3a** ರಲ್ಲಿ ನೀಡಿರುವಂತೆ ಅನುಸರಿಸುವುದು.
8. ಜಿಲ್ಲಾ ಮಟ್ಟದಲ್ಲಿ ಯೋಜನೆಯ ಉಸ್ತುವಾರಿಗಾಗಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಜಿಲ್ಲಾ ಸಾವಯವ ಕೃಷಿ ಚಾಲನ ಸಮಿತಿಯ ಸದಸ್ಯರು ಹಾಗೂ ಸದಸ್ಯರುಗಳ ಕರ್ತವ್ಯ ಮತ್ತು ಜವಾಬ್ದಾರಿಗಳನ್ನು **ಅನುಬಂಧ-8** ರಲ್ಲಿ ನೀಡಲಾಗಿದೆ.
9. ಯೋಜನೆಯ ಉಸ್ತುವಾರಿ ಮತ್ತು ಮೌಲ್ಯಮಾಪನ ವ್ಯವಸ್ಥೆ **ಅನುಬಂಧ-7** ರಲ್ಲಿ ನೀಡಿರುವಂತೆ ಅನುಸರಿಸುವುದು.

**ಒಟ್ಟಾರೆಯಾಗಿ ರಾಜ್ಯದಲ್ಲಿ ಸಾವಯವ ಸಿರಿ ಯೋಜನಾ ಅನುಷ್ಠಾನದ ಸಂಕ್ಷಿಪ್ತ ಮಾಹಿತಿ**

- "ಸಾವಯವ ಸಿರಿ" ಯೋಜನೆಯನ್ನು ಮೂರು ಮಹಡಿ (ಹಂತದ)ಯ ಕಾರ್ಯಕ್ರಮವಾಗಿ ಮೂರು ವರ್ಷಗಳ ಅವಧಿಯಲ್ಲಿ ಅನುಷ್ಠಾನಗೊಳಿಸಲಾಗುವುದು.
  - (i) ಜಿಲ್ಲಾ ಮಟ್ಟದಲ್ಲಿ-ಸಾಮಾಜಿಕ ಸಂಸ್ಥೆಗಳ ಮುಖಾಂತರ
  - (ii) ತಾಲ್ಲೂಕು ಮಟ್ಟದಲ್ಲಿ- ಸಾವಯವ ಕೃಷಿಕರ ಸಂಘ/ಸಂಸ್ಥೆ/ಒಕ್ಕೂಟಗಳ ಮುಖಾಂತರ ಮತ್ತು
  - (iii) ಕ್ಷೇತ್ರ ಮಟ್ಟದಲ್ಲಿ-ಆಯ್ಕೆಯಾಗುವ ಸಾವಯವ ಕೃಷಿಕರ ಮುಖಾಂತರ
- ಜಿಲ್ಲಾಮಟ್ಟದಲ್ಲಿ ಯೋಜನೆಯಡಿ ಆಯ್ಕೆಯಾಗುವ ಟ್ರಸ್ಟ್ /ಸೊಸೈಟಿ ಕಾಯ್ದೆಯಡಿ ನೊಂದಾಯಿತ ಸಾಮಾಜಿಕ ಸಂಸ್ಥೆಗಳು ಆ ಜಿಲ್ಲೆಯಲ್ಲಿ ಗುರುತಿಸಲಾಗುವ ರೈತರನ್ನು ಸಾವಯವ ಕೃಷಿಯ ವ್ಯಾಪ್ತಿಗೆ ಉತ್ತೇಜಿಸುವ ಜವಾಬ್ದಾರಿ ಹೊಂದಿರುತ್ತವೆ.
- ಸಾಮಾಜಿಕ ಸಂಸ್ಥೆಗಳ ಮುಖಾಂತರ ಅನುಷ್ಠಾನಗೊಳಿಸಬೇಕಾಗಿರುವ ಕಾರ್ಯಕ್ರಮಗಳಿಗೆ ಬಿಡುಗಡೆಯಾಗುವ ಅನುದಾನವನ್ನು ಜಿಲ್ಲೆಯ ಆ ವಿಭಾಗದ ಉಪ ಕೃಷಿ ನಿರ್ದೇಶಕರು ಹಾಗೂ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆ ನಿಯೋಜಿಸುವ ಪ್ರತಿನಿಧಿಯ ಹೆಸರಿನಲ್ಲಿ ಜಂಟಿ ಬ್ಯಾಂಕ್ ಖಾತೆ ತೆಗೆದು ಬಿಡುಗಡೆಯಾದ ಅನುದಾನವನ್ನು ಮಾರ್ಗಸೂಚಿಯನ್ವಯ ಜಂಟಿಯಾಗಿ ವ್ಯವಹಾರ ನಿರ್ವಹಿಸತಕ್ಕದ್ದು.
- ತಾಲ್ಲೂಕಿನಿಂದ ಆಯ್ಕೆಯಾಗುವ ಟ್ರಸ್ಟ್/ಸೊಸೈಟಿ ಕಾಯ್ದೆಯಡಿ ನೊಂದಾಯಿತ ಸಾವಯವ ಕೃಷಿಕರ ಸಂಘಗಳು ಪ್ರತಿ ತಾಲ್ಲೂಕಿನಲ್ಲಿ 750 ರೈತರುಗಳನ್ನು ಗುರುತಿಸಿ ತಲಾ 30 ರೈತರನ್ನೊಳಗೊಂಡಂತೆ ಪ್ರತಿ ತಾಲ್ಲೂಕಿನಲ್ಲಿ 25 ಗುಚ್ಛಗಳನ್ನು ರಚಿಸಿ ಕಾರ್ಯಕ್ರಮ ಅನುಷ್ಠಾನಗೊಳಿಸುವುದು.
- ಯೋಜನೆ ಅನುಷ್ಠಾನ ಪೂರ್ವ ತಾಲ್ಲೂಕಿನಿಂದ ಆಯ್ಕೆಯಾದ ಎಲ್ಲಾ ರೈತರ ಜಮೀನಿನ ಮಣ್ಣು ಮಾದರಿಗಳನ್ನು ಕಡ್ಡಾಯವಾಗಿ ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಮಣ್ಣು ಆರೋಗ್ಯ

ಚೀಟಿಯನ್ನು ಪ್ರತಿಯೊಬ್ಬರಿಗೂ ವಿತರಿಸಿ ದಾಖಲಾತಿಗಳನ್ನು ಸಂಬಂಧಪಟ್ಟ ಸಂಘಗಳು ದಾಖಲಿಸಲು ಕ್ರಮವಹಿಸುವುದು.

- ಆಯ್ಕೆಯಾದ ಸ್ಥಳದ ಫಲಾನುಭವಿ ರೈತ/ ರೈತ ಮಹಿಳೆಯರನ್ನು ಆ ಜಿಲ್ಲೆಯಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಯು ಆಯೋಜಿಸುವ ತರಬೇತಿ/ಅಧ್ಯಯನ ಪ್ರವಾಸ/ ಕ್ಷೇತ್ರೋತ್ಸವ ಇನ್ನಿತರೆ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಪಾಲ್ಗೊಳ್ಳುವಂತೆ ಸಂಬಂಧಪಟ್ಟ ಆಯ್ಕೆಯಾದ ಸಂಘಗಳು ಕ್ರಮವಹಿಸುವುದು.
- ಸಾವಯವ ಕೃಷಿ ಪದ್ಧತಿಗೆ ಪರಿವರ್ತಿಸಲು ಅವಶ್ಯವಿರುವ ಘಟಕಗಳ ಅನುಷ್ಠಾನಕ್ಕೆ ಸಂಘಗಳು ತಮ್ಮ ವ್ಯಾಪ್ತಿಯಿಂದ ಆಯ್ಕೆಯಾದ ಯೋಜನಾ ಪ್ರದೇಶದ ಪ್ರಾಥಮಿಕ ಸಮೀಕ್ಷೆ(ನಿಗದಿತ ನಮೂನೆಯಲ್ಲಿ) ಹಾಗೂ ಫಲಾನುಭವಿ ರೈತರುಗಳ ಬೇಡಿಕೆಯನ್ನಾಧರಿಸಿ ಫಲಾನುಭವಿವಾರು ಸೂಕ್ತ ಕ್ರಿಯಾಯೋಜನೆಯನ್ನು ಸಿದ್ಧಪಡಿಸುವುದು.
- ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ಸಾವಯವ ಕೃಷಿಕರಿಗೆ ಯೋಜನೆಯಡಿ ಸಾಮಾನ್ಯ ವರ್ಗದ ರೈತರಿಗೆ ಶೇ.75ರಷ್ಟು ಹಾಗೂ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡ ಮತ್ತು ರೈತ ಮಹಿಳೆ ಫಲಾನುಭವಿಗಳಿಗೆ ಶೇ.90ರಷ್ಟು ಸಹಾಯಧನದಲ್ಲಿ ಸಾವಯವ ಕೃಷಿಗೆ ಪೂರಕವಾದ ಘಟಕಗಳನ್ನು ಒದಗಿಸಲಾಗುವುದು.
- ಪ್ರಾಥಮಿಕವಾಗಿ ಅನುಷ್ಠಾನಗೊಂಡ ಪ್ರದೇಶದ ರೈತ ಫಲಾನುಭವಿಗಳಿಗೆ ಮಣ್ಣಿನ ಫಲವತ್ತತೆ ಹೆಚ್ಚಿಸಲು ಹಾಗೂ ಸಾವಯವ ಇಂಗಾಲದ ಪ್ರಮಾಣವನ್ನು ಹೆಚ್ಚಿಸಲು ಕಡ್ಡಾಯವಾಗಿ ಹಸಿರೆಲೆ ಗೊಬ್ಬರ ಬೀಜ ವಿತರಣೆ, ಸಾವಯವ ಗೊಬ್ಬರ ಉತ್ಪಾದನೆ, ಪೋಷಕಾಂಶ ನಿರ್ವಹಣೆ ಸಂಬಂಧಿಸಿದ ಕಾರ್ಯಕ್ರಮಗಳಿಗೆ ಆದ್ಯತೆ ನೀಡುವುದು.
- ಬಯೋಡೈಜೆಸ್ಟರ್ ಘಟಕ ನಿರ್ಮಿಸಲು ಇಚ್ಛಿಸುವ ಆಯ್ದ ಫಲಾನುಭವಿಗಳು ಈಗಾಗಲೇ ನೆಲಹಾಸು ಮತ್ತು ಗಂಜಲ ಸಂಗ್ರಹಣ ತೊಟ್ಟಿಯನ್ನು ಕಡ್ಡಾಯವಾಗಿ ನಿರ್ಮಿಸಿಕೊಂಡಿರಬೇಕು. ಇಲ್ಲವಾದಲ್ಲಿ ಪ್ರಾರಂಭದಲ್ಲಿ ನೆಲಹಾಸು ನಿರ್ಮಿಸಲು ಸಹಾಯಧನ ನೀಡಿ ಮುಂದಿನ ವರ್ಷದಲ್ಲಿ ಬಯೋಡೈಜೆಸ್ಟರ್ ನಿರ್ಮಾಣಕ್ಕೆ ಪರಿಗಣಿಸುವುದು.
- ತಾಲ್ಲೂಕುವಾರು ಸಿದ್ಧಪಡಿಸಲಾಗುವ ಕ್ರಿಯಾ ಯೋಜನೆಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ ಕ್ರೂಢೀಕೃತ ಕ್ರಿಯಾ ಯೋಜನೆಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಸಾವಯವ ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಆಯ್ಕೆಯಾದ ಸಂಘಗಳು ಅನುಷ್ಠಾನಗೊಳಿಸುವುದು.
- ತಾಲ್ಲೂಕಿನಲ್ಲಿ ಆಯ್ಕೆಯಾಗುವ ಸಂಘಗಳಿಗೆ ಯೋಜನೆಯ ಅಂಕಿ ಅಂಶಗಳ ನಿರ್ವಹಣೆಗೆ ಅವಶ್ಯಕ ಲೇಖನ ಸಾಮಗ್ರಿಗಳ ವೆಚ್ಚಕ್ಕೆ ಅವಕಾಶ ಕಲ್ಪಿಸಲಾಗಿದೆ.

**2021-22ನೇ ಸಾಲಿನ ಘೋಷಣಾ ಕಾರ್ಯಕ್ರಮವಾದ "ಸಾವಯವ ಸಿರಿ" ಯೋಜನೆಯನ್ನು ರಾಜ್ಯಾದ್ಯಂತ ತುರ್ತು ಅನುಷ್ಠಾನಗೊಳಿಸುವ ಸಂಬಂಧ ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಕಾಲಮಿತಿಯೊಳಗೆ (Calender of activities) ಯೋಜನೆಯ ಅನುಷ್ಠಾನಕ್ಕೆ ತುರ್ತು ಚಾಲನೆ ನೀಡಲು ಈ ಮೂಲಕ ಸೂಚಿಸಲಾಗಿದೆ.**

(ಕೃಷಿ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

ಕೃಷಿ ನಿರ್ದೇಶಕರು

**ಪ್ರತಿಯನ್ನು:**

1. ಅಧ್ಯಕ್ಷರು, ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿರವರ ಮಾಹಿತಿಗಾಗಿ ಕಳುಹಿಸಿದೆ.
2. ಮಾನ್ಯ ಕೃಷಿ ಸಚಿವರ ಆಪ್ತ ವಿಭಾಗಕ್ಕೆ ಮಾಹಿತಿಗಾಗಿ ಕಳುಹಿಸಿದೆ.

## ಸಾವಯವ ಸಿರಿ ಯೋಜನೆಯ ಅನುಷ್ಠಾನ ವೇಳಾ ಪಟ್ಟಿ

| ಕ್ರ.ಸಂ | ಚಟುವಟಿಕೆಗಳು | ಕಾಲಮಿತಿ |
|---|---|---|
| 1 | ಯೋಜನೆ ಅನುಷ್ಠಾನಕ್ಕಾಗಿ ಜಿಲ್ಲಾ ಮಟ್ಟದಲ್ಲಿ ನೋಂದಾಯಿತ ಸಾಮಾಜಿಕ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ. | 16.02.2022 ರೊಳಗಾಗಿ |
| 2 | ಅರ್ಜಿಗಳ ಪರಿಶೀಲನೆ ಹಾಗೂ ಶಿಫಾರಸ್ಸಿನೊಂದಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಚಾಲನಾ ಸಮಿತಿಗೆ ಮಂಡನೆ. | 21.02.2022 ರೊಳಗಾಗಿ |
| 3 | ಜಿಲ್ಲಾ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗಾಗಿ ಕೇಂದ್ರ ಕಛೇರಿಗೆ ಸಲ್ಲಿಕೆ. | 28.02.2022 ರೊಳಗಾಗಿ |
| 4 | ಜಿಲ್ಲಾವಾರು ನೋಂದಾಯಿತ ಸಾಮಾಜಿಕ ಸಂಸ್ಥೆಗಳ ಆಯ್ಕೆಗಾಗಿ ರಾಜ್ಯ ಮಟ್ಟದ ಅನುಮೋದನೆ. | 03.03.2022 ರೊಳಗಾಗಿ |
| 5 | ರಾಜ್ಯ ಮಟ್ಟದ ಅನುಮೋದನೆಯೊಂದಿಗೆ ಜಿಲ್ಲಾವಾರು ನೋಂದಾಯಿತ ಸಾಮಾಜಿಕ ಸಂಸ್ಥೆಗಳಿಗೆ ಕಾರ್ಯಾದೇಶ ನೀಡುವಿಕೆ. | 10.03.2022 ರೊಳಗಾಗಿ |
| 6 | ಅನುಮೋದಿತ ಜಿಲ್ಲಾವಾರು ನೋಂದಾಯಿತ ಸಾಮಾಜಿಕ ಸಂಸ್ಥೆಗಳ ಜೊತೆಗೆ MOU ಹಾಗೂ ಜಂಟಿ ಖಾತೆ ತೆರೆಯುವಿಕೆ. | |
| 7 | ಜಂಟಿ ಖಾತೆಗೆ ಯೋಜನಾ ಅನುಷ್ಠಾನಕ್ಕಾಗಿ ಕೇಂದ್ರ ಕಛೇರಿಯಿಂದ ಬಿಡುಗಡೆಯಾಗುವ ಅನುದಾನದ ವರ್ಗಾವಣೆ | 14.03.2022 ರೊಳಗಾಗಿ |
| 8 | ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗುವ ಸಾಮಾಜಿಕ ಸಂಸ್ಥೆಗಳು ಪ್ರತಿ ತಾಲ್ಲೂಕಿನ ಕ್ಷೇತ್ರಮಟ್ಟದಲ್ಲಿ ಆಯ್ಕೆಯಾಗುವ ತಲಾ 750 ಕೃಷಿಕರಿಗೆ ತರಬೇತಿ / ಅಧ್ಯಯನ ಪ್ರವಾಸ ಇನ್ನಿತರೆ ಸಂಬಂಧಿತ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಕ್ರಿಯಾ ಯೋಜನೆ ಸಿದ್ಧಪಡಿಸಿ ಆ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರಿಗೆ ಸಲ್ಲಿಸುವುದು. | 25.03.2022 ರೊಳಗಾಗಿ |
| 9 | ಯೋಜನೆ ಅನುಷ್ಠಾನಕ್ಕಾಗಿ ತಾಲ್ಲೂಕು ಮಟ್ಟದಲ್ಲಿ ನೋಂದಾಯಿತ ಸಾವಯವ ರೈತರ ಗುಂಪು/ ಸಂಘ/ ಒಕ್ಕೂಟಗಳಿಂದ ಅರ್ಜಿ ಆಹ್ವಾನಿಸಲು ಪತ್ರಿಕಾ ಪ್ರಕಟಣೆ.<br>ಅರ್ಜಿಗಳ ಪರಿಶೀಲನೆ ಹಾಗೂ ಶಿಫಾರಸ್ಸಿನೊಂದಿಗೆ ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಚಾಲನಾ ಸಮಿತಿಗೆ ಮಂಡನೆ.<br>ಜಿಲ್ಲಾ ಚಾಲನಾ ಸಮಿತಿಯ ಶಿಫಾರಸ್ಸಿನೊಂದಿಗೆ ರಾಜ್ಯ ಮಟ್ಟದ ಸಾವಯವ ಕೃಷಿ ಉನ್ನತ ಮಟ್ಟದ ಅಧಿಕಾರಯುಕ್ತ ಸಮಿತಿಯ ಅನುಮೋದನೆಗೆ ಸಲ್ಲಿಕೆ. | 25.03.2022 ರೊಳಗಾಗಿ |
| 10 | ರಾಜ್ಯ ಮಟ್ಟದ ಅನುಮೋದನೆಯೊಂದಿಗೆ ತಾಲ್ಲೂಕುವಾರು ನೋಂದಾಯಿತ ಸಂಘಗಳಿಗೆ ಕಾರ್ಯಾದೇಶ ನೀಡುವಿಕೆ. | 30.03.2022 ರೊಳಗಾಗಿ |
| 11 | ತಾಲ್ಲೂಕುವಾರು ಕಾರ್ಯಾದೇಶ ಪಡೆದ ಸಂಘಗಳು ಪ್ರತಿ ತಾಲ್ಲೂಕಿನಲ್ಲಿ 750 ಸಾವಯವ ಕೃಷಿಕರನ್ನು/ಆಸಕ್ತಿ ಇರುವವರನ್ನು ಗುರುತಿಸಿ ಜಂಟಿ ಸಹಿಯೊಂದಿಗೆ ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು. | 30.04.2022 ರೊಳಗಾಗಿ |
| 12 | ಜಿಲ್ಲಾ ಮಟ್ಟದಲ್ಲಿ ಆಯ್ಕೆಯಾಗಿರುವ ಸಾಮಾಜಿಕ ಸಂಸ್ಥೆಯ ಕ್ರಿಯಾ ಯೋಜನೆ ಮೇರೆಗೆ ಆ ವ್ಯಾಪ್ತಿಯ ಉಪ ಕೃಷಿ ನಿರ್ದೇಶಕರು ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ರೈತರುಗಳನ್ನು ಸಾಮಾಜಿಕ ಸಂಸ್ಥೆಗಳ ಮುಖಾಂತರ ತರಬೇತಿಗೆ ಒಳಪಡಿಸುವ ಕಾರ್ಯ ನಿರ್ವಹಿಸುವುದು. | 13.05.2022 ರೊಳಗಾಗಿ |
| 13 | ಸಂಘವು ಕ್ಷೇತ್ರ ಮಟ್ಟದಲ್ಲಿ ಆಯ್ಕೆಯಾಗುವ ರೈತರ ಜಮೀನಿನ ಮಣ್ಣು ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿ ಮಣ್ಣು ಆರೋಗ್ಯ ಚೀಟಿಯನ್ನು ಪಡೆಯುವುದು. | 22.05.2022 ರೊಳಗಾಗಿ |
| 14 | ಕ್ಷೇತ್ರ ಮಟ್ಟದಲ್ಲಿನ ಕೃಷಿಕರಿಗೆ ನೀಡಬಹುದಾದ ಘಟಕಗಳ ಅನುಷ್ಠಾನಕ್ಕೆ ಆ ವ್ಯಾಪ್ತಿಯ ಸಂಘವು ಫಲಾನುಭವಿಗಳ ಬೇಡಿಕೆ ಆಧರಿಸಿ ಕ್ರಿಯಾ ಯೋಜನೆ ಸಿದ್ಧಪಡಿಸಿ ಸಂಬಂಧಿಸಿದ ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರುಗಳಿಗೆ ಸಲ್ಲಿಸುವುದು. | 30.05.2022 ರೊಳಗಾಗಿ |
| 15 | ತಾಲ್ಲೂಕುವಾರು ಸಿದ್ಧಪಡಿಸಲಾಗುವ ಕ್ರಿಯಾ ಯೋಜನೆಯನ್ನು ತಾಲ್ಲೂಕು ಸಹಾಯಕ ಕೃಷಿ ನಿರ್ದೇಶಕರು ಪರಿಶೀಲಿಸಿ ಕ್ರೋಢೀಕೃತ ಕ್ರಿಯಾ ಯೋಜನೆಯನ್ನು ಜಿಲ್ಲಾ ಜಂಟಿ ಕೃಷಿ ನಿರ್ದೇಶಕರ ಅಧ್ಯಕ್ಷತೆಯ ಸಾವಯವ ಚಾಲನಾ ಸಮಿತಿಯ ಅನುಮೋದನೆಯೊಂದಿಗೆ ಅನುಷ್ಠಾನಗೊಳಿಸುವುದು. | 30.05.2022 ರೊಳಗಾಗಿ |